ಸಿ.ಸಿ.ನಂ.962ಃ2015

ಪಿಡಬ್ಲೂಃ 1

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 09-03-2020

<u>ಪಾಟೀಸವಾಲು ಆರೋಪಿ ಪರ ವಕೀಲರಿಂದ</u>

ಆರೋಪಿತರು ನಮಗೆ ಸಂಬಂಧಿಕರಾಗಬೇಕು. ಒಂದೇ ಮನೆಯನ್ನು ನಾವು ಮತ್ತು ಆರೋಪಿತರು ಭಾಗ ಮಾಡಿಕೊಂಡಿರುತ್ತೇವೆ. ನಮ್ಮ ಮನೆಯ ನೀರು ಮತ್ತು ಆರೋಪಿತರ ಮನೆಯ ಚರಂಡಿ ನೀರು ಒಂದೇ ಕಡೆ ಸೇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದ ಘಟನೆ ಬೆಳಿಗ್ಗೆ **10** ಗಂಟೆಗೆ ಪ್ರಾರಂಭವಾಗಿ ಅರ್ಧ ಗಂಟೆ ನಡೆದಿರುತ್ತದೆ. ನಿಖರವಾದ ದಿನಾಂಕ ಮತ್ತು ವಾರವನ್ನು ಹೇಳಲಾಗುವುದಿಲ್ಲ. **1** ನೇ ಆರೋಪಿ ಕಾರ್ಖಾನಗೆ ಕೆಲಸಕ್ಕೆ ಹೋಗುತ್ತಾನೆಂದರೆ ಸರಿಯಲ್ಲ. **1** ನೇ ಆರೋಪಿ ಮನೆಯಲ್ಲಿಯೇ ಇರುತ್ತಾನೆ. ಆತ ವ್ಯಾಪಾರ ಮತ್ತು ಕಾರ್ಖಾನಗೆ ಹೋಗುತ್ತಾನೆಂದರೆ ಸರಿಯಲ್ಲ. ಘಟನೆ ನಡೆದಾಗ ಚಾಸಾ **3** ಮತ್ತು **4** ಬಂದಿರುತ್ತಾರೆ. **1** ನೇ ಆರೋಪಿ ನನಗೆ ಮೊದಲು ಬೈದು ನನಗೆ ಮೊದಲು ಹಲ್ಲೆ ಮಾಡಿರುತ್ತಾನೆ. ನನ್ನ ಬಲಭುಜಕ್ಕೆ ಕೊಡಲಿ ಕಾವಿನಿಂದ ಹೊಡೆದಿರುತ್ತಾನೆ. **1** ನೇ ಆರೋಪಿ ಸ್ಥಳದಲ್ಲಿರಲಿಲ್ಲ ಆತನ ಮೇಲೆ ನಾನು ಸುಳ್ಳು ದೂರು ನೀಡಿದ್ದೇನೆಂದರೆ ಸರಿಯಲ್ಲ. ಆರೋಪಿಗೂ ನಮಗೂ ಚರಂಡಿ ನೀರಿನ ಸಲುವಾಗಿ ಜಗಳ ನಡೆದಿದ್ದರಿಂದ ಆವರ ವಿರುದ್ದ ಸುಳ್ಳು ಪಿರ್ಯಾದಿ ನೀಡಿರುತ್ತೇನೆ. ಪಿರ್ಯಾದಿಯನ್ನು ನಾನು ಹೇಳಿದಂತೆ ನನ್ನ ಗಂಡ ಬರದಿರುತ್ತಾನೆ. ಪಿರ್ಯಾದಿಯಲ್ಲಿ ಅಲ್ಲಲ್ಲಿ ಅಕ್ಷರಗಳನ್ನು ಹೊಡೆದು ಹಾಕಿದ್ದಾರೆಂದರೆ ಸರಿ. ಪಿರ್ಯಾದಿಯಲ್ಲಿ ಕೊಡಲಿ ಎಂದು ಬರೇಸಿಲ್ಲ ಆದರೆ ಕೊಡಲಿ ಕಾವಿನಿಂದ ಎಂದು ಬರೆಸಿದ್ದೇನೆ. ಪಿರ್ಯಾದಿಯಲ್ಲಿ ಕೊಡ್ಲಿಯಿಂದ ಎಂದ ಬರೆಸಿದೆ ಎಂದರೆ ಸರಿ. ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

ನಾನು ಚಿಕಿತ್ಸೆ ತೆಗೆದುಕೊಳ್ಳಲು ಆಸ್ಪತ್ರೆಗೆ ಹೋಗಿರುತ್ತೇನೆ. ಮೊದಲು ಪೋಲಿಸ ಠಾಣೆಗೆ ನಂತರ ಆಸ್ಪತೆಗೆ ಹೋಗಿದ್ದೆವು. ನಾನು ಹೇಳಿದಂತೆ ಯಾವುದೇ ಗಲಾಟೆಯಾಗಿಲ್ಲ, ಹಲ್ಲೆಯಾಗಿಲ್ಲ , ನಮ್ಮ ಚರಂಡಿ ನೀರಿನ ವಿಚಾರವಾಗಿ ನಡೆದ ಮಾತಿನ ಚಕಮಕಿಯನ್ನು ಬಳಸಿಕೊಂಡು ನಾನು ಸುಳ್ಳು ಪಿರ್ಯಾದಿ ನೀಡಿದ್ದೇನೆಂದರೆ ಸರಿಯಲ್ಲ. ಆರೋಪಿ ನಮ್ಮ ಮೇಲೆ ಪಿರ್ಯದಿ ನೀಡಿದ ನಂತರ ನಾನ ಅವರ ಮೇಲೆ ಪಿರ್ಯಾದಿ ನೀಡಿದ್ದೇನೆಂದರೆ ಸರಿಯಲ್ಲ.

ಮರುದಿನ ಪೋಲಿಸರು ಸ್ಥಳಕ್ಕೆ ಬೆಳಿಗ್ಗೆ **8** ಗಂಟೆಗೆ ಬಂದಿದ್ದರು. ಸ್ಥಳವನ್ನು ಅವರಿಗೆ ತೋರಿಸಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದಿಲ್ಲ, ನಾನು ಅವರಿಗೆ ಸ್ಥಳ ತೋರಿಸಿಲ್ಲವೆಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದಿಲ್ಲ, ಘಟನೆ ನಡೆದಿಲ್ಲ , ನಾನು ಆವರ ವಿರುಧ್ಧ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಪ್ರ. ಜೆ ಎಂ ಎಫ್ ಸಿ ಕೊಪ್ಪಳ